

- **ನೀರಿನ ದರ ಸಂಗ್ರಹ:** ಸಂಘವು ನೀರಾವರಿ ನಿಗಮದೊಂದಿಗೆ 5 ವರ್ಷದ ಒಪ್ಪಂದವನ್ನು ಮಾಡಿಕೊಂಡ ನಂತರ ನೀರಿನ ದರ ವಸೂಲಿ ಮಾಡುವ ಅಧಿಕಾರ ದೊರೆಯುತ್ತದೆ. ಪ್ರತಿ ಹಂಗಾಮಿನ ನಂತರ ನಿಗಮವು 1000 ಘನ ಮೀಟರ್ ನೀರಿಗೆ ರೂ. 12 ರಂತೆ ಬಿಲ್ ನೀಡುತ್ತದೆ. ಸಂಘವು ತನ್ನ ರೈತರಿಂದ ಸರ್ಕಾರವು ನಿಗದಿಪಡಿಸಿದ ನೀರಿನ ದರವನ್ನು ವಸೂಲಿ ಮಾಡಬೇಕು. ಅಗತ್ಯವಿದ್ದಲ್ಲಿ ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರವನ್ನು ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ಸಂಗ್ರಹಣೆ ಮಾಡಬಹುದು.
- **ವಾರ್ಷಿಕ ನಿರ್ವಹಣೆ ಅನುದಾನ:** ಅಚ್ಚುಕಟ್ಟು ಪ್ರದೇಶ ನಿರ್ವಹಣೆಗಾಗಿ ಒಂದು ಲಕ್ಷ ರೂ. ವಾರ್ಷಿಕ ನಿರ್ವಹಣೆ ಅನುದಾನವು ಕಾಡಾದಿಂದ ದೊರೆಯುತ್ತದೆ. ಇದನ್ನು ಪಡೆಯಲು ಸಂಘಗಳು ಆಯಾ ವರ್ಷದ ಲೆಕ್ಕ ಪರಿಶೋಧನೆ ವರದಿ, ನೀರು ನಿರ್ವಹಣಾ ಒಪ್ಪಂದ, ವಾರ್ಷಿಕ ಮಹಾಸಭೆ ವರದಿ ಮತ್ತು ನೀರಿನ ದರ ವಸೂಲಿ ದಾಖಲೆಗಳನ್ನು ಪ್ರತಿ ವರ್ಷದ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಕಾಡಾಗೆ ಸಲ್ಲಿಸಬೇಕು.
- **ಸರ್ಕಾರಿ ಯೋಜನೆಗಳ ಅನುಷ್ಠಾನ:** ವಿವಿಧ ಇಲಾಖೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ರೈತರಿಗೆ ದೊರೆಯುವ ಸರ್ಕಾರಿ ಯೋಜನೆಗಳನ್ನು ಸೂಕ್ತ ಫಲಾನುಭವಿಗಳನ್ನು ಹುಡುಕಿ ಅನುಷ್ಠಾನಗೊಳಿಸುವುದು.

## ವಿಜಯನಗರ ಆಧುನೀಕರಣ ಯೋಜನೆ ಅನುಷ್ಠಾನದಲ್ಲಿ ಸಂಘಗಳ ಸಹಭಾಗಿತ್ವ

- ಮುಖ್ಯ ಕಾಲುವೆ ಕಾಮಗಾರಿಗಳ ಅನುಷ್ಠಾನಕ್ಕೆ ಸಲಹೆ ಹಾಗೂ ಬೆಂಬಲ.
- ಜಂಟಿ ತಪಾಸಣೆ ಮೂಲಕ ಕಾಲುವೆ ಮತ್ತು ಅಚ್ಚುಕಟ್ಟು ಪ್ರದೇಶದ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರ ಸೂಚಿಸುವುದು.
- ಕಾಡಾ ಕಾಮಗಾರಿ ಯೋಜನೆ ತಯಾರಿ ಹಾಗೂ ಅನುಷ್ಠಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ.



- ಅಚ್ಚುಕಟ್ಟು ಪ್ರದೇಶದ ಕೊನೆಯ ರೈತರಿಗೂ ನೀರು ತಲುಪುವಂತೆ ಜಾಗ್ರತೆ ವಹಿಸುವುದು.
- ಸಂಘದ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದ ಉಸ್ತುವಾರಿ ಮತ್ತು ನಿರ್ವಹಣೆ ಮಾಡುವುದು.
- ಕಾಮಗಾರಿ ನಡೆಯುವಾಗ ಸ್ಮಾರಕಗಳು ಹಾಗೂ ಪರಿಸರಕ್ಕೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು.
- ಸಂಘದ ಆಸ್ತಿ–ಪಾಸ್ತಿ, ಕಾಲುವೆ, ತೂಬು ಹಾಗೂ ಇನ್ನಿತರೆ ಆಸ್ತಿಗಳನ್ನು ಜವಾಬ್ದಾರಿಯಿಂದ ಕಾಪಾಡುವುದು.
- ಯೋಜನೆಯಡಿ ರಚಿಸುವ ಮಹಿಳಾ ಉಪಸಮಿತಿಗಳಿಗೆ, ಸಂಘದಲ್ಲಿ ಸ್ಥಾನಮಾನ ನೀಡಿ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲ ನೀಡುವುದು
- ಕಾಲುವೆಗಳ ಮಾಲಿನ್ಯತೆಯನ್ನು ತಡೆಗಟ್ಟಲು ಸಂಘಗಳಲ್ಲಿ ಚರ್ಚಿಸಿ ಗ್ರಾಮ ಪಂಚಾಯತ್ ಮತ್ತು ನಗರಸಭೆಗಳೊಂದಿಗೆ ಕ್ರಮವಹಿಸುವುದು.
- ನೀರಿನ ದರ ಸಂಗ್ರಹ ಮಾಡುವುದು, ಸರ್ಕಾರಕ್ಕೆ ಜಮಾ ಮಾಡುವುದು ಹಾಗೂ ಉಳಿಕೆ ಮೊತ್ತದಲ್ಲಿ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದು.
- ಐತಿಹಾಸಿಕ ಮಹತ್ವ ಹೊಂದಿರುವ ವಿಜಯನಗರ ಕಾಲುವೆಗಳ ಬಗ್ಗೆ ಸಂಘಗಳ ವ್ಯಾಪ್ತಿಯಲ್ಲಿ ಅರಿವು ಮೂಡಿಸುವುದು ಹಾಗೂ ಕಾಲುವೆ ಮತ್ತು ಅಣೆಕಟ್ಟುಗಳ ಬಳಿ ಇರುವ ಸ್ಮಾರಕಗಳನ್ನು ಸಂರಕ್ಷಿಸುವುದು.




### ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಕರ್ನಾಟಕ ನೀರಾವರಿ ನಿಗಮ ನಿ.**
ಯೋಜನಾ ಅನುಷ್ಠಾನ ಕಛೇರಿ, ಮುನಿರಾಬಾದ್, ಕೊಪ್ಪಳ–583233


**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ, ಮುನಿರಾಬಾದ್, ಕೊಪ್ಪಳ–583233

**ಯೋಜನಾ ಸಹಾಯಕ ಸಮಾಲೋಚಕ ತಂಡ**
ಇಜಿಐಎಸ್, ನಂ 87, ಸೀತಾ ಕುಂಜ, 5ನೇ ಅಡ್ಡರಸ್ತೆ,
ಮೃತ್ಯುಂಜಯನಗರ, ಹೊಸಪೇಟೆ–583201, ವಿಜಯನಗರ ಜಿಲ್ಲೆ


ಶ್ರೀ ನಂಜುಂಡೇಶ್ವರ ಪ್ರಿಂಟರ್ಸ್, ಬೆಂಗಳೂರು–10

# ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

## ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ



## ನೀರು ಬಳಕೆದಾರರ ಸಹಕಾರ ಸಂಘಗಳ ಪಾತ್ರ ಮತ್ತು ಜವಾಬ್ದಾರಿಗಳು

## ಹಿನ್ನೆಲೆ

ಕರ್ನಾಟಕ ಸರ್ಕಾರವು 2000ನೇ ಇಸವಿಯಲ್ಲಿ ಕರ್ನಾಟಕ ನೀರಾವರಿ ಕಾಯ್ದೆ 1965ಕ್ಕೆ ತಿದ್ದುಪಡಿ ತಂದು ನೀರು ಬಳಕೆದಾರರ ಸಹಕಾರ ಸಂಘಗಳು ಮತ್ತು ಅವುಗಳ ಒಕ್ಕೂಟಗಳನ್ನು ರಚಿಸಲು ಅವಕಾಶ ಮಾಡಿಕೊಟ್ಟಿತು. ಇದು ರೈತರು ನೀರಾವರಿ ನಿರ್ವಹಣೆಯಲ್ಲಿ ಭಾಗವಹಿಸಲು ತೆಗೆದುಕೊಂಡ ಮಹತ್ವದ ಹೆಜ್ಜೆ. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಿಗೆ (ಕಾಡಾ) ನೀ.ಬ.ಸ. ಸಂಘಗಳು ಹಾಗೂ ಒಕ್ಕೂಟಗಳನ್ನು ರಚಿಸುವ ಜವಾಬ್ದಾರಿಯನ್ನು ನೀಡಲಾಯಿತು. 300–500 ಹೆಕ್ಟೇರ್ ಅಚ್ಚುಕಟ್ಟಿಗೆ ಒಂದರಂತೆ ನೀ.ಬ.ಸ. ಸಂಘಗಳನ್ನು ರಚಿಸಲು ಅವಕಾಶವಿದೆ. ಅಚ್ಚುಕಟ್ಟಿನ ರೈತರು ಈ ಸಂಘಗಳಲ್ಲಿ ರೂ.115/– ಷೇರು ಹಣ ಸಂದಾಯ ಮಾಡಿ ಸದಸ್ಯತ್ವ ಪಡೆಯುತ್ತಾರೆ. ಪ್ರತಿ ಸಂಘದಲ್ಲಿ ಒಟ್ಟು 13 ಮಂದಿ ನಿರ್ದೇಶಕರಿದ್ದು, (ನಾಮನಿರ್ದೇಶಿತ ಸದಸ್ಯರೂ ಸೇರಿ) ಒಬ್ಬರು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇರುವರು.

ಕರ್ನಾಟಕ ಸರ್ಕಾರವು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕರ್ನಾಟಕ ನೀರಾವರಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಯಲ್ಲಿ ನೀ.ಬ.ಸ.ಸಂಘಗಳ ಭಾಗವಹಿಸುವಿಕೆ ಮಹತ್ವವಾಗಿದೆ. ಯೋಜನಾ ಸಹಾಯಕ ಸಮಾಲೋಚಕ ತಂಡವು ವಿಜಯನಗರ ಕಾಲುವೆಗಳ ವ್ಯಾಪ್ತಿಯ ಎಡದಂಡೆಯಲ್ಲಿ 10, ಬಲದಂಡೆಯಲ್ಲಿ 18 ಸೇರಿದಂತೆ 28 ಸಂಘಗಳನ್ನು ರಚಿಸುವ ಮತ್ತು ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕೆ.ಎನ್.ಎನ್.ಎಲ್.ಗೆ ನೆರವು ನೀಡುತ್ತಿದೆ.



## ಕಾರ್ಯಗಳು

1. ಸಾಂಸ್ಥಿಕ ಹಣಕಾಸು ನೆರವಿನಿಂದ ನೀರಾವರಿ ಸೌಲಭ್ಯ ಮತ್ತು ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವುದು. ಮುಖ್ಯವಾಗಿ ಹೊಲಗಾಲುವೆ, ಮೇಲ್ಮೈ ಬಸಿಗಾಲುವೆ ಮತ್ತು ಇತರೆ ರಚನೆಗಳ ನಿರ್ವಹಣೆ ಹಾಗೂ ದುರಸ್ತಿ ಕೈಗೊಳ್ಳುವುದು.
2. ಘನ ಅಳತೆ ಆಧಾರದಲ್ಲಿ ನೀರನ್ನು ಪಡೆದು ಸಾಮಾನ್ಯ ಸಭೆಯಲ್ಲಿ ತೀರ್ಮಾನವಾದಂತೆ, ಸಂಘದ ಸದಸ್ಯರಿಗೆ ಮತ್ತು ಸದಸ್ಯರಲ್ಲದವರಿಗೆ ಹಾಗೂ ಕೊನೆ ಭಾಗದ ರೈತರಿಗೆ ವಿತರಿಸುವುದು.



3. ರೈತರಿಗೆ ನೀರಿನ ದರ ಮತ್ತು ಸೇವಾ ಶುಲ್ಕ ವಿಧಿಸುವುದು ಮತ್ತು ನಿಗದಿತ ಅವಧಿಯೊಳಗೆ ಸಂಗ್ರಹಿಸುವುದು.
4. ಪ್ರತಿ ನೀರಾವರಿ ಹಂಗಾಮಿಗೆ ನೀರಿನ ಬೇಡಿಕೆಯ ಮತ್ತು ಹಣಕಾಸಿನ ಅಂದಾಜುಪತ್ರ ತಯಾರಿಸುವುದು.
5. ನೀರು ಬಳಕೆದಾರರ ನಡುವಿನ ನೀರು ಹಂಚಿಕೆ–ಬಳಕೆ ವಿವಾದಗಳನ್ನು ನಿವಾರಿಸುವುದು.
6. ಮುಖ್ಯ ಕಾಲುವೆ ಮತ್ತು ಹೊಲಗಾಲುವೆ ಕೆಲಸಗಳನ್ನು ನಿರ್ವಹಿಸಲು ನಿಗಮ ಮತ್ತು ಕಾಡಾಗೆ ಸಹಕರಿಸುವುದು.
7. ಕಾಲುವೆಗಳ ಎರಡೂ ಬದಿಗಳಲ್ಲಿ ಸಸಿಗಳನ್ನು ನೆಡುವುದು ಮತ್ತು ರಕ್ಷಣೆ ಮಾಡುವುದು.
8. ದಾನಿಗಳು ಮತ್ತು ಗ್ರಾಮ ಪಂಚಾಯತಿಗಳಿಂದ ಹಣಕಾಸು ಸಂಗ್ರಹಿಸಿ ಅಚ್ಚುಕಟ್ಟು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದು.

## ಪಾತ್ರ ಮತ್ತು ಜವಾಬ್ದಾರಿಗಳು

- **ದಾಖಲೆಗಳ ನಿರ್ವಹಣೆ :** ಸಂಘದ ನಡಾವಳಿ/ಠರಾವು ರಿಜಿಸ್ಟರ್‌ಗಳನ್ನು ದಾಖಲಿಸುವುದು ಮತ್ತು ನಿರ್ವಹಿಸುವುದು.
- **ಷೇರು–ಸದಸ್ಯತ್ವ ಶುಲ್ಕ:** ಸರ್ಕಾರ ನಿಗದಿಪಡಿಸಿದ ಕನಿಷ್ಠ ಷೇರು ಅಥವಾ ಸದಸ್ಯತ್ವ ಶುಲ್ಕವು ರೂ. 115 ಆಗಿದೆ. ಇದರಲ್ಲಿ ರೂ.100 ಷೇರು ಮೊತ್ತ, ರೂ. 10 ಪ್ರವೇಶ ಶುಲ್ಕ ಮತ್ತು ರೂ. 5 ಷೇರು ಶುಲ್ಕವಾಗಿರುತ್ತದೆ. ಸಂಘದ ಪ್ರವರ್ತಕ ಸಮಿತಿಯು ಇದಕ್ಕಿಂತ ಹೆಚ್ಚಿನ ಸದಸ್ಯತ್ವ ಶುಲ್ಕ ನಿರ್ಧರಿಸಿ ಸಂಗ್ರಹಿಸುವ ಅಧಿಕಾರ ಹೊಂದಿದೆ. ನೀ.ಬ.ಸ.ಸಂಘಕ್ಕೆ ಒಳಪಡುವ ಎಲ್ಲಾ ಅಚ್ಚುಕಟ್ಟುದಾರರನ್ನು ಸದಸ್ಯರನ್ನಾಗಿಸಿ 100% ಪ್ರಗತಿ ಸಾಧಿಸಬೇಕು.
- **ಬ್ಯಾಂಕ್ ಖಾತೆ ನಿರ್ವಹಣೆ:** ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯುವುದು ಮತ್ತು ಎಲ್ಲಾ ಹಣಕಾಸು ವಹಿವಾಟುಗಳು ಬ್ಯಾಂಕ್ ಮೂಲಕವೇ ನಡೆಯುವಂತೆ ಕ್ರಮವಹಿಸುವುದು.
- **ಆಡಳಿತ ಮಂಡಳಿ ರಚನೆ ಮತ್ತು ನಿರ್ವಹಣೆ:** ಸಹಕಾರ ಸಂಘಗಳ ಚುನಾವಣಾ ಪ್ರಾಧಿಕಾರವು ಚುನಾವಣೆ ಮೂಲಕ ಸಂಘದ ಪದಾಧಿಕಾರಿಗಳನ್ನು ನೇಮಕ ಮಾಡುವುದು; ಸರ್ಕಾರದ ಕಾನೂನಿನಂತೆ ಸಾಮಾನ್ಯ ವರ್ಗಕ್ಕೆ (ಕಾಲುವೆ ಕೊನೆ ಭಾಗದ ಒಬ್ಬ ರೈತರು ಸೇರಿದಂತೆ) 6, ಹಿಂದುಳಿದ ವರ್ಗಕ್ಕೆ 2, ಮಹಿಳೆಯರಿಗೆ 2, ಪರಿಶಿಷ್ಟ ಜಾತಿಗೆ 1 ಮತ್ತು ಪರಿಶಿಷ್ಟ ಪಂಗಡಕ್ಕೆ 1 ಸ್ಥಾನ ಮೀಸಲಿಡಲಾಗಿದ್ದು, ಒಟ್ಟು 12 ಜನ ಚುನಾಯಿತ ನಿರ್ದೇಶಕರನ್ನು ನೇಮಕ ಮಾಡಲಾಗುವುದು. ನೀರಾವರಿ ನಿಗಮದಿಂದ ಒಬ್ಬರು ನಾಮ ನಿರ್ದೇಶಿತ ನಿರ್ದೇಶಕರು ಇರುವರು. ಒಟ್ಟಾರೆ ನಿರ್ದೇಶಕ ಮಂಡಳಿಯಲ್ಲಿ 13 ಜನ ನಿರ್ದೇಶಕರಿರುತ್ತಾರೆ.
- **ಮಹಿಳಾ ಭಾಗವಹಿಸುವಿಕೆ:** ಎಲ್ಲಾ ಮಹಿಳಾ ಖಾತೆದಾರರನ್ನು ಸದಸ್ಯರನ್ನಾಗಿ ಮಾಡುವ ಮೂಲಕ ಸಂಘ ಹಾಗೂ ನಿರ್ದೇಶಕ ಮಂಡಳಿಯಲ್ಲಿ ಶೇ.30ಕ್ಕಿಂತ ಅಧಿಕ ಮಹಿಳೆಯರ ಭಾಗವಹಿಸುವಿಕೆಗೆ ಅವಕಾಶ ನೀಡುವುದು.
- **ಮಾಸಿಕ ಸಭೆ:** ಪ್ರತಿ ತಿಂಗಳು ಕನಿಷ್ಠ ಒಂದು ನಿರ್ದೇಶಕರ ಮಂಡಳಿ ಸಭೆ ನಡೆಸಬೇಕು. ಆದರೆ ಎರಡು ಸಭೆಗಳ ನಡುವಿನ ಅವಧಿಯು ಮೂರು ತಿಂಗಳನ್ನು ಮೀರ ಕೂಡದು. ಅಭಿವೃದ್ಧಿ ಕಾರ್ಯಕ್ರಮ ನಡೆಯುವಾಗ 15 ದಿನಗಳಿಗೊಮ್ಮೆ ಮತ್ತು ತುರ್ತು ಅವಶ್ಯಕತೆ ಇದ್ದರೆ 3 ದಿನಕ್ಕೊಮ್ಮೆ ಸಭೆ ನಡೆಸುವುದು.
- **ತೆರಿಗೆ ಸಂಬಂಧಿತ ದಾಖಲೆಗಳ ನಿರ್ವಹಣೆ:** ಆದಾಯ ತೆರಿಗೆ (ಪಾನ್–ಟಾನ್) ಹಾಗೂ ಸರಕು ಮತ್ತು ಸೇವೆಗಳ ತೆರಿಗೆ (ಜಿ.ಎಸ್.ಟಿ) ಖಾತೆಗಳನ್ನು ಹೊಂದಿ ದಾಖಲೆಗಳನ್ನು ನಿರ್ವಹಿಸುವುದು.
- **ಲೆಕ್ಕ ಪರಿಶೋಧನೆ:** ಪ್ರತಿ ಹಣಕಾಸು ವರ್ಷದಲ್ಲಿ (01 ಏಪ್ರಿಲ್–ಮಾರ್ಚ್ 31ರವರೆಗೆ) ನಡೆದ ಆದಾಯ–ಖರ್ಚು, ಸ್ವೀಕೃತಿ–ಪಾವತಿ ಮತ್ತು ಆಸ್ತಿ–ಬಾಕಿಗಳಿಗೆ ಲೆಕ್ಕ ಪರಿಶೋಧನೆ ಮಾಡಿಸಿ ಪಾರದರ್ಶಕತೆ ಕಾಯ್ದುಕೊಳ್ಳುವುದು.
- **ವಾರ್ಷಿಕ ಮಹಾಸಭೆ:** ಸಹಕಾರ ಕಾಯ್ದೆಯ ನಿಯಮದಂತೆ ಪ್ರತಿವರ್ಷ ಸೆಪ್ಟಂಬರ್ 25ರ ಒಳಗೆ ವಾರ್ಷಿಕ ಮಹಾಸಭೆ/ಸಾಮಾನ್ಯ ಸಭೆ ಆಯೋಜಿಸುವುದು.
- **ಏಕಕಾಲಿಕ ಕಾರ್ಯಾನುದಾನ ಬಳಕೆ:** ಕಾಡಾ ಮೂಲಕ ಏಕಕಾಲಿಕ ಕಾರ್ಯಾನುದಾನ (ಒನ್‌ಟೈಮ್ ಫಂಕ್ಷನಲ್ ಗ್ರಾಂಟ್) ಪಡೆಯುವುದು ಮತ್ತು ಅದರ ಸೂಕ್ತ ಬಳಕೆ ಮಾಡುವುದು. ಈ ಮೊತ್ತವು ಪ್ರತಿ ಹೆಕ್ಟೇರಿಗೆ ರೂ.1,200 ಇದ್ದು, ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ 45% ನಂತೆ (ಒಟ್ಟು 90%) ರೂ.1080 ನೀಡುತ್ತವೆ. ಬಾಕಿ ರೂ.120 (10%) ಅನ್ನು ರೈತರು ವಂತಿಗೆಯಾಗಿ ನೀಡಬೇಕು.

